ಮನ್ನೆ ಡೀಡ್ ಕರಾವ್ರೋಜಿ...' ಗುನುಗುತ್ತಾ, ನನ್ನನ್ನು ಕಾಯಿಸಬೇಡ... ಹಂಬಲಿಸುತ್ತಿದ್ದಳು. ಆದರೆ ಅಂಜುವಿನ ತಾಯಿತಂದೆ ನಿಧಾನವಾಗಿ ಅವಳಿಗೆ ರಾಜಮನೆತನದವರ ಸ್ಥಾನಮಾನವನ್ನು ತಿಳಿಸ ತೊಡಗಿದ್ದರು. ಅವರಿಗೆ ತಾವು ಎಂದೂ ಸಾಟಿ ಆಗುವುದಿಲ್ಲ ಎಂದು ಹೇಳುತ್ತಿದ್ದರು. ಮತ್ತು ಬಿಯಾವರದ ಮಧುಬಾಬುವಿಗೆ ಅವಳನ್ನು ಕೊಟ್ಟು ವಿವಾಹ ಮಾಡುವ ತಯಾರಿಗಳನ್ನು ಕೂಡ ಮಾಡಿಕೊಳ್ಳತೊಡಗಿದ್ದರು. ಇನ್ನೆರಡು ವರ್ಷ ಕಳೆಯಲಿ ಎಂದು ಅವರು ಯೋಚಿಸುತ್ತಿದ್ದರು.

ರಾಜಕುವರನಿಗೆ ಮುನ್ನೂರು ಕಿ.ಮೀ. ದೂರದ ಕೋಟಾದಲ್ಲಿ ಕೆಲವು ತಿಂಗಳು ಕಲಿಯಬೇಕಾದ ಸಂದರ್ಭ ಒದಗಿ ಬಂತು. ಈಗ ತಾನು ಹೋದರೆ ಅಂಜುವನ್ನು ನೋಡಲು ಕನಿಷ್ಠ ಮೂರು ತಿಂಗಳಾದರೂ ಅಥವಾ ಹೆಚ್ಚೇ ಆಗಬಹುದು ಅನ್ನಿಸಿತು. ಅವನ ತುಟಿಗಳು ಯಾವಾಗಲೂ ಅವಳು ಹಾಡಿದ ಹಾಡನ್ನೇ ಗುನುಗುತ್ತಿದ್ದವು. ಅಂದು ಅವಳನ್ನು ನೋಡಿಕೊಂಡೇ ಹೋಗಬೇಕು ಎಂದು ಪಣತೊಟ್ಟ. ನೇರವಾಗಿ ನೀರಿನ ಕೊಳದ ಬಳಿ ಹೋಗಿ ಕುಳಿತು ಕಾಯುತ್ತಿದ್ದ. ಸಣ್ಣ ಸಣ್ಣ ಹುಡುಗಿಯರೆಲ್ಲ ಬರುತ್ತಿದ್ದರು. ಆದರೆ ಅಂಜುವಿನ ಜೊತೆಗಾತಿಯರು ಇಲ್ಲ. ಎಲ್ಲರೂ ದೊಡ್ಡವರಾಗಿದ್ದರಲ್ಲ... ಮನೆ ಕೆಲಸ ನಿಭಾಯಿಸಲು ಕಲಿಯುತ್ತಿದ್ದರು. ಇವನು ಸಂಜೆಯವರೆಗೂ ಅಲ್ಲೇ ಕುಳಿತಿದ್ದ. ಅತ್ಯಂತ ನಿರಾಶೆಯಿಂದ. ಅಂತೂ ಸಂಜೆ ಇಳಿಯುತ್ತಿತ್ತು. ಇನ್ನೆಂದೂ ತಾನು ಅಂಜುವನ್ನು ನೋಡಲಾರೆ ಎಂಬ ನಿರಾಶೆಯಿಂದ ಹಾಡುತ್ತಿದ್ದ 'ಲಕ್ ಚಿಪ್ ನ ಜಾವ್ರೋಜಿ...' ಅಷ್ಟರಲ್ಲಿ ಕೇಳಿಬಂದಿತ್ತು ಕಾಲ್ಗೆಜ್ಜೆಯ ಧ್ವನಿ. ಕೈಬಳೆಗಳ ಘಲ್ ಸದ್ದು. ತಲೆಯೆತ್ತಿ ನೋಡಿದರೆ ಅತ್ಯಂತ ಸುಂದರವಾಗಿ ಕಾಣುತ್ತಿದ್ದ ಅಂಜು ನಿಂತಿದ್ದಾಳೆ. ತಲೆಯ ಮೇಲೆ ಹಳದಿ ನೀಲಿ ಬಣ್ಣದ ಓಢ್ನಿ ಧರಿಸಿ... ಮುಖದಲ್ಲಿ ಲಜ್ಜೆ. ಕೆನ್ನೆಯಲ್ಲಿ ವಿಶೇಷವಾದ ಕೆಂಪುಬಣ್ಣ... ಸೂರ್ಯ ಇಳಿಯುತ್ತಾ ತನ್ನ ಬಣ್ಣವನ್ನು ಅವಳಿಗೂ ಬಳಿದಿದ್ದ. 'ಒಡೆಯಾ...' ಇಂಪಾಗಿ ಕರೆದಳು. 'ಅಂಜೂ...' ಧಾವಿಸಿ... ಅವಳನ್ನಪ್ಪಿದ. 'ನೀನಿಲ್ಲದೆ ಇರಲಾರೆ ಅಂಜು...' ತನ್ನ ವೇದನೆ ತೋಡಿಕೊಂಡ. ಆ ಅಪ್ಪುಗೆಯಲ್ಲಿ ಇಬ್ಬರೂ ಮೈಮರೆತದ್ದು ಆಕಸ್ಮಿಕವೇ... ಅಚಾತುರ್ಯವೇ! ಅಂಜು ಮತ್ತೆ ಮತ್ತೆ ಚಿಂತಿಸಿದಳು.

